**Lang. Code : 07**

इस पुस्तिका में **20** पृष्ठ हैं ।
This booklet contains **20** pages.

# AAT-20-I

**प्रश्न-पत्र I / PAPER I**

**कन्नड़ भाषा परिशिष्ट**
**Kannada Language Supplement**
**भाग IV & V / PART IV & V**

**परीक्षा पुस्तिका संकेत**
**Test Booklet Code**

**I**

**परीक्षा पुस्तिका संख्या**
**Test Booklet No.**

**इस परीक्षा पुस्तिका को तब तक न खोलें जब तक कहा न जाए ।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें ।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें । / For instructions in Kannada see Page 2 of this Booklet.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं** ।
2. परीक्षार्थी भाग I, II, III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से ।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं । भाषा परिशिष्टों को आप अलग से माँग सकते हैं ।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें ।
5. इस भाषा पुस्तिका का **संकेत** है **I** । यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ**-2 एवं मुख्य परीक्षा पुस्तिका पर छपे संकेत से मिलता है । अगर यह भिन्न हो तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा I - (कन्नड़) (प्र. 91 से प्र. 120)
   भाग-V : भाषा II - (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं । इस परीक्षा पुस्तिका में केवल कन्नड़ भाषा से संबंधित प्रश्न दिए गए हैं । **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए । जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए ।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा I (भाग-IV) में चुनी गई भाषा से भिन्न हो ।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें ।
10. सभी उत्तर केवल OMR उत्तर पत्र पर ही अंकित करें । अपने उत्तर ध्यानपूर्वक अंकित करें । उत्तर बदलने हेतु श्वेत रंजक का प्रयोग निषिद्ध है ।

## *INSTRUCTIONS FOR CANDIDATES*

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Parts I, II, III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page / marking responses in the Answer Sheet.
5. The CODE for this Language Booklet is **I**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language I - (Kannada) (Q. 91 to Q. 120)
   Part-V : Language II - (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part -V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capitals) :
अनुक्रमांक : (अंकों में) ____________________
Roll Number : in figures
: (शब्दों में) ____________________
: in words
परीक्षा केन्द्र (बड़े अक्षरों में) : ____________________
Centre of Examination (in Capitals) :
परीक्षार्थी के हस्ताक्षर : ____________ निरीक्षक के हस्ताक्षर : ____________
Candidate's Signature : Invigilator's Signature :
Facsimile signature stamp of
Centre Superintendent ____________________

**I**

**Lang. Code : 07**

# AAT-20-I

**ಪ್ರಶ್ನೆ ಪತ್ರಿಕೆ I**
**ಕನ್ನಡ ಭಾಷಾ ಪೂರಕ**
**ಭಾಗ IV & V**

ಪ್ರಶ್ನೆ ಪುಸ್ತಿಕೆ ಸಂಕೇತ

**I**

ಈ ಪ್ರಶ್ನೆ ಪುಸ್ತಿಕೆ **20** ಪುಟಗಳನ್ನು ಹೊಂದಿರುತ್ತದೆ.

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**
**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 & 20) ಗಮನವಿಟ್ಟು ಓದಿರಿ.**
**ಪರೀಕ್ಷಾರ್ಥಿಗಳಿಗೆ ಸೂಚನೆಗಳು:**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) ಅಥವಾ ಭಾಗ V(ಭಾಷೆ II) ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II, III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ ನೀಲಿ **ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **I** ಆಗಿದೆ. ಉತ್ತರ ಪತ್ರಿಕೆಯ ಪುಟ-2 ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ IV ಮತ್ತು V, ಇದರಲ್ಲಿ **60** ವಸ್ತುನಿಷ್ಟ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ 1 ಅಂಕ :
   ಭಾಗ IV : ಭಾಷಾ I — (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ V : ಭಾಷಾ II — (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ IV ರಲ್ಲಿ ಭಾಷೆ I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ V ರಲ್ಲಿ ಭಾಷೆ II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ I ಮತ್ತು/ಅಥವಾ II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು - ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. ಪರೀಕ್ಷಾರ್ಥಿ ಭಾಗ V (ಭಾಷೆ II) ಕ್ಕಾಗಿ, ಭಾಷೆ I (ಭಾಗ IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) ______________________

: (ಅಕ್ಷರಗಳಲ್ಲಿ) ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) ______________________

ಪರೀಕ್ಷಾರ್ಥಿಯ ಸಹಿ ______________ ನಿರೀಕ್ಷಕರ ಸಹಿ ______________

Facsimile signature stamp of
Centre Superintendent : ______________________

**ಅಭ್ಯರ್ಥಿಗಳು ಕನ್ನಡವನ್ನು ಭಾಷೆ – I ಎಂದು ಆರಿಸಿ- ಕೊಂಡಿದ್ದರೆ ಮಾತ್ರ ಭಾಗ – IV ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 91 – 120) ಉತ್ತರಿಸಬೇಕು.**

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only

## ಭಾಗ–IV

## ಭಾಷೆ–I

## ಕನ್ನಡ

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-I ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-IV ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 91 - 120) ಉತ್ತರಿಸಬೇಕು.

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91-99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮುಕ್ತಕಗಳಿಗೆ ವಿಶಿಷ್ಟವಾದ ಸ್ಥಾನವಿದೆ. ನವೋದಯ ಕವಿಗಳು ಮಾಡಿದ ವಿವಿಧ ಕಾವ್ಯ ಪ್ರಯೋಗಗಳಲ್ಲಿ ಮುಕ್ತಕಗಳೂ ಸೇರಿವೆ. ಹೊಸಗನ್ನಡ ಕಾವ್ಯ ಪ್ರಾಚೀನ ಕಾವ್ಯದಿಂದ ಭಿನ್ನವಾಗಿ ಅಭಿವ್ಯಕ್ತಿ ಪಡೆಯಲು ಮುಕ್ತ ಛಂದಸ್ಸು, ಕಥನ ವಸ್ತುವಿನ್ಯಾಸದಿಂದ ಬಿಡುಗಡೆ ಪಡೆದದ್ದು ಸ್ವತಂತ್ರವಾದ ಭಾವಲಹರಿಯನ್ನು ಪ್ರಕಟಿಸಿದ್ದು ಮುಖ್ಯ ಕಾರಣವಾಗಿದೆ. ಹೊಸಗನ್ನಡ ಕಾವ್ಯದಲ್ಲಿ ಭಾವಗೀತೆ ನವೋದಯ ಕಾವ್ಯದ ಮುಖ್ಯ ಪ್ರಕಾರವಾಗಿದ್ದರೂ ಮುಕ್ತಕಗಳು ವಿಶಿಷ್ಟ ಪ್ರಭಾವ ಬೀರಿವೆ. ನವೋದಯ ಸಾಹಿತ್ಯದ ಹಿರಿಯ ಲೇಖಕರಾದ ಡಿವಿಜಿ ಅವರ 'ಮಂಕುತಿಮ್ಮನ ಕಗ್ಗ' ಕನ್ನಡ ಮುಕ್ತಕ ಸಾಹಿತ್ಯದ ಶಿಖರಪ್ರಾಯವಾದ ಕೃತಿಯಾಗಿದೆ. 'ಮಂಕುತಿಮ್ಮನ ಕಗ್ಗ' ಕನ್ನಡ ಓದುಗರ ಮೇಲೆ ಅಗಾಧವಾದ ಪ್ರಭಾವ ಬೀರಿದೆ. ಮಾನವ ಬಾಳಿಗೆ ಬೇಕಾದ ಜೀವನದರ್ಶನವನ್ನು ಕಟ್ಟಿ ಕೊಡುವ ಮಂಕುತಿಮ್ಮನ ಕಗ್ಗ ಮುಕ್ತಕ ಸಾಹಿತ್ಯ ರಚಿಸುವವರಿಗೆ ಮಾರ್ಗದರ್ಶಿಯಾಗಿದೆ. 'ಮಂಕುತಿಮ್ಮನ ಕಗ್ಗ'ದ ವ್ಯಾಖ್ಯಾನಗಳು, ಪ್ರವಚನ ಸಂಪುಟಗಳು ಸಿದ್ಧವಾಗಿವೆ. ಡಿವಿಜಿ 'ಮಂಕುತಿಮ್ಮನ ಕಗ್ಗ'ದ ಚೌಪದಿಗಳು ಕನ್ನಡದ ಅನೇಕ ಕವಿ ಲೇಖಕರನ್ನು ಪ್ರಭಾವಿಸಿದೆ. ಕರ್ನಾಟಕ ಸರಕಾರದ ಜಲಮಂಡಳಿಯಲ್ಲಿ ಅಧಿಕಾರಿಯಾಗಿರುವ ಎಚ್.ಜಿ. ಮಳಗಿ ಅವರು ಡಿವಿಜಿ ಪರಂಪರೆಯಲ್ಲಿ 'ಸಾವಿರದೊಂದು ಕಗ್ಗಂಟು' ಮುಕ್ತಕ ಕಾವ್ಯ ರಚಿಸಿದ್ದಾರೆ. ಎಚ್.ಜಿ. ಮಳಗಿ ಅವರು ಪಂಡಿತ ಪರಂಪರೆಯಲ್ಲಿ ಬೆಳೆದವರು. ಸಾಂಪ್ರದಾಯಿಕ ಮತ್ತು ಆಧುನಿಕ ವಿಚಾರಧಾರೆಯನ್ನು ಒಪ್ಪಿ ಚಿಂತನ ಶೀಲತೆಯನ್ನು ಪ್ರಕಟಿಸಿದವರು. ಮಳಗಿಯವರನ್ನು ಆಕರ್ಷಿಸಿದ್ದು ಮುಕ್ತಕಗಳು ಇದಕ್ಕೆ ಕಾರಣ ಮಾನವ ಬಾಳಿಗೆ ಬೇಕಾದ ನೀತಿಕಾವ್ಯ ಕೊಡಬೇಕೆಂಬ ಅವರ ಮನೀಷೆ. ಆದ್ದರಿಂದಲೇ ಅವರು ವಿಸ್ತಾರವಾದ ಅಧ್ಯಯನ ನಡೆಸಿದ್ದಾರೆ. ಭಾರತೀಯ ದರ್ಶನಶಾಸ್ತ್ರ, ತತ್ವಚಿಂತನೆ, ಜ್ಞಾನದ ವಿವಿಧ ಶಾಖೆಗಳು, ವಿಚಾರಧಾರೆಗಳನ್ನು ಅವರು ಅವಲೋಕಿಸಿದ್ದಾರೆ. ಸಾವಿರದೊಂದು ಮುಕ್ತಕಗಳನ್ನು ವಿಷಯಾನುಸಾರ ವಿಭಜಿಸಿಕೊಂಡು ಅವುಗಳಲ್ಲಿ ತಮ್ಮ ವಿಚಾರಧಾರೆಯನ್ನು ಅಳವಡಿಸಿದ್ದಾರೆ. ಮಳಗಿ–ಯವರು ಕವಿಯಾಗಿ ಕಾಣಿಸಿಕೊಳ್ಳವದು ಈ ಮುಕ್ತಕಗಳ ಮೂಲಕವೇ. ಅವರ ಪ್ರತಿಭೆ, ಶಕ್ತಿ ಸಾಮರ್ಥ್ಯಗಳು ಈ ಮುಕ್ತಕಗಳ ರಚನೆಯಲ್ಲಿ ಕ್ರಿಯಾಶೀಲವಾಗಿವೆ.

ಕಗ್ಗ ರಚಿಸುವ ಕಲೆ ತಮಗೆ ಹೊಸತೆಂದೂ, ಅದಕ್ಕೆ ಬೇಕಾದ ಹೆಗ್ಗಳಿಕೆ, ಅಗ್ಗಳಿಕೆ, ತಮಗಿಲ್ಲವೆಂದೂ ಮಳಗಿಯವರು ಕಾವ್ಯಾರಂಭದಲ್ಲಿಯೇ

ಹೇಳಿಕೊಂಡಿದ್ದಾರೆ. ಕಗ್ಗ ಹೊಸೆಯಲು ಬೇಕಾದ ಅರ್ಹತೆ ತಮಗಿದೆಯೇ ಎಂಬ ಆತ್ಮವಿಮರ್ಶೆ ಮಳಗಿಯವರನ್ನು ಕಾಡಿದೆ. ಭಗವದ್ ಭಕ್ತರ ಸಂಗ, ದೇಶ, ಕಾಲ, ಜ್ಞಾನ, ಭಕ್ತಿ ವೈರಾಗ್ಯ ತಮಗಿಲ್ಲವೆಂದು ಮಳಗಿಯವರು ತುಂಬ ವಿನಯದಿಂದ ಹೇಳಿದ್ದಾರೆ. ಆದರೆ ತಮ್ಮಲ್ಲಿ ಸ್ಫುರಿಸುತ್ತಿರುವ ಅದ್ಭುತ ಕಾವ್ಯರಸ ಈ ಕಾವ್ಯರಚನೆಗೆ ಕಾರಣವಾಗಿದೆ ಎಂದಿದ್ದಾರೆ. ಮಳಗಿಯವರ ಜಿಜ್ಞಾಸೆ ಅತ್ಯಂತ ವ್ಯಾಪಕವಾದದ್ದು. ಮಾನವ ಜೀವನಕ್ಕೆ ಬೇಕಾದ ನೀತಿ ಸಂದೇಶ ನೀಡಲು ರಾಮಾಯಣ, ಮಹಾಭಾರತ, ಭಾಗವತದಂತಹ ಕಾವ್ಯಗಳಿದ್ದರೂ ಆಧುನಿಕ ಕಾಲಕ್ಕೆ ಬೇಕಾದ ನೀತಿಸಂಹಿತೆಯ ಅವಶ್ಯಕತೆಯನ್ನು ಮಳಗಿಯವರು ಪ್ರತಿಪಾದಿಸಿದ್ದಾರೆ. 'ಬ್ರಹ್ಮಸತ್ಯ', 'ಜಗನ್ಮಿಥ್ಯ', 'ತತ್ವಮಸಿ', 'ಅಹಂ ಬ್ರಹ್ಮಾಸ್ಮಿ'ಯಂಥ ಮಹಾವಾಕ್ಯ-ಗಳು ನಮ್ಮ ಮುಂದಿವೆ. ಭಾರತೀಯರಾದ ನಾವು ಬಹುದೇವತಾ ಉಪಾಸಕರು. ಬ್ರಹ್ಮ ಜಿಜ್ಞಾಸೆಗೆ ನೂರೆಂಟು ವಾದಭೇದಗಳು ನಮ್ಮಲ್ಲಿವೆ. ಸತ್ಯ ಮಿಥ್ಯೆಗಳ ಚರ್ಚೆ ನಿರಂತರವಾಗಿ ನಡೆದಿದೆ. ಪರತತ್ವ ಚಿಂತನೆ ಸುಲಭ ಸಾಧ್ಯವಲ್ಲ. ಬ್ರಹ್ಮ ಸೃಷ್ಟಿಯ ರಹಸ್ಯವನ್ನು ತಿಳಿಯಲು ನಮ್ಮ ದಾರ್ಶನಿಕರು ವಿಧ ವಿಧದ ವಾದಗಳನ್ನು ಪ್ರತಿಪಾದಿಸಿದ್ದಾರೆ. ಅನಂತ ಕೋಟಿ ಬ್ರಹ್ಮಾಂಡ ನಾಯಕನಾದ ಪರಮಾತ್ಮ ಸ್ವರೂಪ ಅದ್ಭುತವಾದುದು. ನಮ್ಮಲ್ಲಿಯೇ ಪರತತ್ವವಿದೆ. ಅದರ ಅರಿವು ನಮಗೆ ಅತ್ಯವಶ್ಯಕವಾಗಿದೆ. ಜಗನ್ನಿಯಾಮಕನು ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣನಾಗಿದ್ದಾನೆ. ಸಕಲಾಗಮ ವೇದಶಾಸ್ತ್ರಗಳು ಭಗವಂತನ ಭವ್ಯ ಸ್ವರೂಪವನ್ನು ಕೊಂಡಾಡುತ್ತವೆ. ಅಗಾಧತೆ, ಸಮೃದ್ಧಿ, ಕರುಣೆಯ ರೂಪ ದೈವದಲ್ಲಿದೆ. ಆದ್ದರಿಂದಲೇ ಜ್ಞಾನ ದೀವಿಗೆ ಹಚ್ಚಿ ಮಾನಾಭಿಮಾನ ಬೆಳೆಸಬೇಕಿದೆ. ಭಾರತೀಯ ದರ್ಶನಗಳು ಹೇಳುವಂತೆ ಪಾಪಿಗಳಿಗೂ ಪಾವನ ಸಾಧನೆಯ ದಾರಿಯಿಂದ ಉದ್ಧಾರವಾಗಲಿದೆ.

91. ಮಂಕುತಿಮ್ಮನ ಕಗ್ಗವನ್ನು ಏನೆಂದು ಕರೆಯಬಹುದು ?
(1) ಒಂದು ಕಗ್ಗ ಕಾವ್ಯ
(2) ಪ್ರಾಚೀನ ಬಗೆಯ ಕಾವ್ಯ
(3) ಮುಕ್ತಕ ಸಾಹಿತ್ಯದ ಕೃತಿ
(4) ತಿಮ್ಮನ ದಡ್ಡತನವನ್ನು ಹೇಳುವ ಕಾವ್ಯ

92. 'ಕಗ್ಗಂಟು' ಎಂದರೇನು ?
(1) ಓದಲಾಗದ ಕಾವ್ಯ
(2) ಕಪ್ಪಗಿರುವ ಅಂಟು
(3) ಬಿಡಿಸಲಾಗದ ಗಂಟು
(4) ರಾತ್ರಿಯ ಕಪ್ಪು

93. ಮುಕ್ತಕಗಳು ಮಾಡುವ ಕೆಲಸವೇನು ?
(1) ಮುಕ್ತ ಕಂಠದಿಂದ ಪ್ರಶಂಸೆ ಮಾಡುವ ಕೆಲಸ
(2) ಭಾವನೆಗಳ ಲಹರಿಯನ್ನು ಹೊರಬಿಡುವ ಕಾರ್ಯ
(3) ಮುಕ್ತವಾಗಿ ಹಾಡುವ ಕೆಲಸ
(4) ನೀತಿಯನ್ನು ಹೇಳುವ ಕಾರ್ಯ

94. 'ಮಿಥ್ಯ' ಪದದ ವಿರುದ್ಧ ಅರ್ಥದ ಪದ ಯಾವುದು ?
(1) ಸರಿ
(2) ಸತ್ಯ
(3) ಸುಳ್ಳು
(4) ನಿತ್ಯ

95. 'ಸಕಲಾಗಮ' ಪದದ ಸಂಧಿಯ ಸ್ವರೂಪ
(1) ಗುಣಸಂಧಿ
(2) ಆಗಮಸಂಧಿ
(3) ಸವರ್ಣದೀರ್ಘಸಂಧಿ
(4) ಲೋಪಸಂಧಿ

96. ವಿಚಾರಧಾರೆಯನ್ನು ಪದದಲ್ಲಿನ ವಿಭಕ್ತಿಯ ಸ್ವರೂಪ

(1) ತೃತಿಯಾ ವಿಭಕ್ತಿ

(2) ಷಷ್ಟಿ ವಿಭಕ್ತಿ

(3) ಸಪ್ತಮಿ ವಿಭಕ್ತಿ

(4) ದ್ವಿತಿಯಾ ವಿಭಕ್ತಿ

97. 'ಅಹಂ ಬ್ರಹ್ಮಾಸ್ಮಿ' – ಅನ್ನುವ ವಾಕ್ಯದ ಅರ್ಥ

(1) ನಾನೇ ಬ್ರಹ್ಮನು

(2) ಬ್ರಹ್ಮನು ಅಹಂನ ಪ್ರತೀಕ

(3) ಸೃಷ್ಟಿಕರ್ತ ಬ್ರಹ್ಮ

(4) ನೀನಲ್ಲದೆ ಬ್ರಹ್ಮನಿಲ್ಲ

98. ಯಾವ ಕವಿಗಳು ಮುಕ್ತಕಗಳ ಪ್ರಯೋಗ ಮಾಡಿದ್ದಾರೆ ?

(1) ಆಧುನಿಕ ಕವಿಗಳು

(2) ನವೋದಯ ಕವಿಗಳು

(3) ಬಂಡಾಯ ಕವಿಗಳು

(4) ಪ್ರಾಚೀನ ಕವಿಗಳು

99. ಹೊಸಗನ್ನಡ ಕಾವ್ಯ ಬಿಡುಗಡೆ ಪಡೆದದ್ದು ಯಾವುದರಿಂದ ?

(1) ಛಂದಸ್ಸು

(2) ಕಥೆ ಹೇಳುವುದರಿಂದ

(3) ಭಾವನಾಲಹರಿಯಿಂದ

(4) ನಾದಲೀಲೆಯಿಂದ

ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ: **100-105**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.

ಶ್ರೀ ಶಾರದಾದೇವಿ, ಹೇ ಮಾಹಾಮಾತೆ,
ಶ್ರೀ ರಾಮಕೃಷ್ಣ ಗುರುದೇವ ಸಂಪ್ರೀತೆ,
ಪರಮಪಾವನಹೃದಯೆ, ಕಲಿಯುಗದ ಸೀತೆ,
ಭಕ್ತಿಯಿಂದಾರಾಧಿಪೆವು ನಿನ್ನನಮ್ಮ !

ಗಗನದಂತಿಹುದಮ್ಮ ನಿನ್ನ ಗಾಂಭೀರ್ಯ,
ನಿನ್ನ ತೇಜದ ಭಾಗವೀ ನಮ್ಮ ಸೂರ್ಯ,
ನೀ ಕಾಳಿ, ನೀ ಲಕ್ಷ್ಮಿ, ನೀ ಬಿಜ್ಜೆಯಮ್ಮ,
ಮಕ್ಕಳಾಗಿಹ ನಮ್ಮ ಪೊರೆ, ಶಕ್ತಿಯಮ್ಮ !

ಮಹಿಮೆ ಮಹಿಮೆಯನರಿವುದೆಂದೆಂಬರಮ್ಮಾ,
ಗುರುವರ್ಯನಂ ತಿಳಿದ ನೀಂ ಮಹಿಮಳಮ್ಮ,
ಪತಿಭಕ್ತಿಯದೆ ಮುಕ್ತಿ ನಿನಗಾಯಿತಮ್ಮ,
ಪರಶಕ್ತಿ ನೀನಮ್ಮ, ನಮ್ಮ ಸಲಹಮ್ಮ !

ನಿನ್ನ ನಾಮವೆ, ಜನನಿ, ಸುರನದಿಯ ತೀರ್ಥ,
ಎಲೆ ತಾಯೆ, ನೀನೇ ಪವಿತ್ರತಮ ತೀರ್ಥ,
ನಿನ್ನ ಪೂಜೆಯೆ ಭಕ್ತಿ, ಸಾಧನೆ, ವಿರಕ್ತಿ,
ನಿನ್ನ ನೆನೆವುದೆ ನಮಗೆ ಗುರು ತಪಶ್ಶಕ್ತಿ !

100. ಕಲಿಯುಗದ ಸೀತೆ ಯಾರು ?

(1) ಜಾನಕಿ

(2) ಪಾವನ ಹೃದಯಿ

(3) ಶಾರದೆ

(4) ಶಾರದದೇವಿ

101. 'ನಿನ್ನನಮ್ಮ' – ಈ ಪದವನ್ನು ಬಿಡಿಸಿ ಬರೆಯಿರಿ.

(1) ನಿನ್ನನು + ಅಮ್ಮ

(2) ನಿನ್ನ + ನಮ್ಮ

(3) ನಿನ್ನ + ಅಮ್ಮ

(4) ನಿನ್ನನ + ಮ್ಮ

102. 'ಗಗನದಂತಿಹುದು ನಿನ್ನ ಗಾಂಭೀರ್ಯ'– ಅಂದರೆ ಏನು ಅರ್ಥ ?

(1) ಗಂಭೀರತೆಯು ವೈಭವದಿಂದ ಕೂಡಿದೆ

(2) ಗಂಭೀರತೆಯು ನೀಲಿ ಬಣ್ಣದ್ದಾಗಿದೆ

(3) ಗಾಂಭೀರ್ಯವು ದೂರಗಾಮಿಯಾಗಿದೆ

(4) ಗಾಂಭೀರ್ಯವು ವಿಶಾಲವಾಗಿದೆ

103. 'ಪೊರೆ' ಪದದ ಅರ್ಥ ಏನು ?

(1) ಪರದೆ

(2) ತೆಳುವಾದ ಮಂಜು

(3) ರಕ್ಷಿಸು

(4) ಕಣ್ಣಿನ ರೆಪ್ಪೆ

104. 'ಗುರುವರ್ಯನಂ' – ಇಲ್ಲಿರುವ ವಿಭಕ್ತಿ ಯಾವುದು ?

(1) ಸಪ್ತಮಿ ವಿಭಕ್ತಿ

(2) ಷಷ್ಟಿ

(3) ಪ್ರಥಮಾ

(4) ದ್ವಿತಿಯಾ

105. 'ಸಂಪ್ರೀತೆ' ಪದದ ಅರ್ಥ

(1) ಸಂಭವ

(2) ಒಲವನ್ನು ಗಳಿಸಿರುವ

(3) ಸ್ವಲ್ಪ ಪ್ರೀತಿ

(4) ಪ್ರೀತಿಯನ್ನು ಕೊಟ್ಟಿರುವ

ನಿರ್ದೇಶನ : ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.

106. ವ್ಯಾಕರಣವನ್ನು ಕಲಿಸುವಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಪರಿಣಾಮಕಾರಿಯಾದ ದಾರಿಯಾಗಿದೆ ?

(1) ವ್ಯಾಕರಣದ ನಿಯಮಗಳನ್ನು ಕಲಿಸಿ, ಉದಾಹರಣೆಗಳನ್ನು ಕೊಡುವುದು.

(2) ಪಠ್ಯವನ್ನು ಅನುವಾದಿಸುವಾಗ ವ್ಯಾಕರಣದ ನಿಯಮಗಳನ್ನು ಕಲಿಸುವುದು.

(3) ನಿರ್ದಿಷ್ಟ ವ್ಯಾಕರಣದ ಪುಸ್ತಕವನ್ನು ಉಪಯೋಗಿಸಿ ವ್ಯಾಕರಣ ಕಲಿಸುವುದು.

(4) ಒಂದು ಸಂದರ್ಭದಲ್ಲಿ ವ್ಯಾಕರಣವನ್ನು ಕಲಿಸುತ್ತ ವ್ಯಾಕರಣ ನಿಯಮಗಳು ಆವಿಷ್ಕಾರಗೊಳ್ಳುವಂತೆ ಮಾಡುವುದು.

107. 'ಸಾಮಾಜಿಕ ಸಂವಹನ' ತತ್ವವು ಇವರಿಗೆ ಸಂಬಂಧಿಸಿದ್ದಾಗಿದೆ

(1) ಪಾಣಿನಿ

(2) ಸ್ಕಿನ್ನರ್

(3) ವೈಗೋಸ್ಕಿ

(4) ಕೊಹ್ಲಬರ್ಗ್

108. ಮಕ್ಕಳು ಭಾಷೆಯನ್ನು ಗಳಿಸಲು ಈ ಕೆಳಗಿನವುಗಳಲ್ಲಿ ಯಾವುದು ಸಹಾಯ ಮಾಡುತ್ತದೆ ?

(1) ಮಗುವು ಹೆಚ್ಚು ಮಾತನಾಡದ ಮನೆಯ ವಾತಾವರಣ

(2) ಮನೆ ಹಾಗೂ ಸುತ್ತಮುತ್ತ ದೊಡ್ಡವರು ಮಾತನಾಡುವುದನ್ನು ಕೇಳಿಸಿಕೊಳ್ಳುವುದು

(3) ಮಕ್ಕಳನ್ನು ಸರಿಯಾದ ಉಚ್ಚಾರ / ವಾಕ್ಯವನ್ನು ಪುನರಾವರ್ತಿಸುವಂತೆ ಹೇಳುವುದು

(4) ಉಳಿದ ಮಕ್ಕಳ ಜೊತೆಗೆ ಆಟವಾಡುವುದು

109. ಮಕ್ಕಳನ್ನು ಈ ಬಗೆಯಲ್ಲಿ ಅನಾವರಣಗೊಳಿಸಿದರೆ, ಮಕ್ಕಳು ಭಾಷೆಯನ್ನು ಸಹಜವಾಗಿ ಗಳಿಸುತ್ತಾರೆ
(1) ಒಂದು ಕಾಲದಲ್ಲಿ ಒಂದೇ ಭಾಷೆಗೆ
(2) ತತ್‌ಕ್ಷಣದ ಪರಿಸರದಲ್ಲಿ ಇರುವ ಒಂದಕ್ಕಿಂತ ಹೆಚ್ಚು ಭಾಷೆಗೆ
(3) ಎಲೆಕ್ಟ್ರಾನಿಕ್ ಮತ್ತು ಮುದ್ರಣ ಮಾಧ್ಯಮಕ್ಕೆ ಮಾತ್ರ
(4) ಆ ಭಾಷೆಯ ವ್ಯಾಕರಣ ರಚನೆಗಳಿಗೆ

110. ಒಂದು ಪಠ್ಯವನ್ನು ಓದುವಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಹೆಚ್ಚು ಮಹತ್ವದ್ದು ?
(1) ಪಠ್ಯದ ಪ್ರತಿ ಪದವನ್ನು ಓದುವುದು
(2) ವಿರಾಮಚಿಹ್ನೆಗಳ ಮೇಲೆ ಗಮನ ಹರಿಸುವುದು
(3) ಬರೆಯಲಾದ ಪಠ್ಯದ ಅರ್ಥವನ್ನು ಪಡೆಯುವುದು
(4) ಸರಿಯಾಗಿ ಉಚ್ಚರಿಸಿ, ಜೋರಾಗಿ ಓದುವುದು

111. ಈ ಕೆಳಗಿನವುಗಳಲ್ಲಿ ಯಾವುದು ಭಾಷಾ ಬೋಧನೆಯ ಉದ್ದೇಶವಲ್ಲ ?
(1) ಸರಿಯಾಗಿ ತಿಳಿದುಕೊಂಡು ಓದುವ ಸಾಮರ್ಥ್ಯ
(2) ವಿಚಾರಗಳನ್ನು ಪ್ರಯತ್ನಪೂರ್ವಕವಾಗಿ ಹೇಳುವುದು
(3) ಯಾವುದನ್ನು ಕೇಳುತ್ತಾರೋ ಅದನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ
(4) ಸುಸಂಗತವಾದ (coherent) ಬರವಣಿಗೆಯನ್ನು ಬೆಳೆಸಿಕೊಳ್ಳುವುದು

112. ಉಚ್ಚಾರಣಾ (phonological) ಪ್ರಜ್ಞೆಯು ಪ್ರಮುಖ ವಾಗಿ ಇದಕ್ಕೆ ಸಂಬಂಧ ಹೊಂದಿದ್ದಾಗಿದೆ
(1) ಕೇಳುವ ಸಾಮರ್ಥ್ಯ
(2) ಮಾತನಾಡುವ ಸಾಮರ್ಥ್ಯ
(3) ಓದುವ ಸಾಮರ್ಥ್ಯ
(4) ಬರಹದ ಸಾಮರ್ಥ್ಯ

113. ಮಕ್ಕಳು .. .. .. ಭಾಷೆಯ ಸಾಮರ್ಥ್ಯವನ್ನು ಹೊಂದಿರುತ್ತಾರೆ ಎಂದು ನೋಮ್‌ಚಾಮ್‌ಸ್ಕಿ ನಂಬುತ್ತಾರೆ
(1) ಗಳಿಕೆಯ
(2) ಅನುಕರಣೆಯ
(3) ಪರಿವರ್ತನೆಯ
(4) ಭಾಷಾಂತರಿಸುವ

114. ಭಾಷಾ ಕೌಶಲ್ಯವನ್ನು ಹೀಗೆ ಕಲಿಸಬಹುದಾಗಿದೆ
(1) ಅನುಕರಣೆಯ ಮೂಲಕ
(2) ಏಕಾಂತದಲ್ಲಿ
(3) ವಿವರವಾದ ವಿವರಣೆಯನ್ನು ಕೊಡುವುದರ ಮೂಲಕ
(4) ಸಂಘಟಿತವಾದ ಮಾದರಿಯಲ್ಲಿ

115. ಅಧ್ಯಾಪಿಕೆಯು ಪ್ರಾರಂಭದ ಕಲಿಯುವವರನ್ನು ಬರೆದು, ಬಣ್ಣ ಹಾಕುವುದನ್ನು ಉತ್ತೇಜಿಸುತ್ತಿದ್ದಾಳೆ. ಅವಳು .. .. ..
(1) ಕ್ಲಾಸಿನಲ್ಲಿ ಕಲಿಯುವವರನ್ನು ನಿಶ್ಯಬ್ದವಾಗಿರಲು ತೊಡಗಿಸುತ್ತಿದ್ದಾಳೆ.
(2) ಅವರ ಸೂಕ್ಷ್ಮ ಸಹಜ ಕೌಶಲ್ಯವನ್ನು (motor skill) ಬೆಳೆಸಲು ಪ್ರಯತ್ನಿಸುತ್ತಿದ್ದಾಳೆ.
(3) ಬೆಳೆಯುತ್ತಿರುವ ಬಾಲಿಕಾ ಕಲೆಗಾರರನ್ನು ಬೆಳೆಯಲು ಅವಕಾಶ ಕೊಡುತ್ತಿದ್ದಾಳೆ.
(4) ವಿದ್ಯಾರ್ಥಿಗಳನ್ನು ಸುಮ್ಮನೆ ಒಂದು ಚಟುವಟಿಕೆಯಲ್ಲಿ ತೊಡಗಲು ಹಚ್ಚುತ್ತಿದ್ದಾಳೆ.

**116.** ಮೌಖಿಕ ಭಾಷಾ ಕೌಶಲ್ಯವನ್ನು ವೃದ್ಧಿಸಲು ಈ ಕೆಳಗಿನವುಗಳಲ್ಲಿ ಯಾವ ಅಭ್ಯಾಸವು ಹೆಚ್ಚು ಸಹಾಯ ಮಾಡುತ್ತದೆ ?

(1) ಕವನಗಳನ್ನು ವೈಯಕ್ತಿಕವಾಗಿ ಮತ್ತು ಗುಂಪಿನಲ್ಲಿ ಹಾಡುವುದು.

(2) ರೋಲ್ ಪ್ಲೆ (Role Play) ನಲ್ಲಿ ಭಾಗವಹಿಸುವುದು.

(3) ಅಧ್ಯಾಪಿಕೆಯು ಓದಿದ ನಂತರ ಪಠ್ಯದಲ್ಲಿನ ಒಂದು ಅಧ್ಯಾಯವನ್ನು ಗುಂಪಿನಲ್ಲಿ ಓದುವುದು.

(4) ಅಧ್ಯಾಪಿಕೆಯು ಹೇಳಿದ ನಂತರ ಪದಗಳ ಸರಿಯಾದ ಉಚ್ಚಾರವನ್ನು ಗುಂಪಿನಲ್ಲಿ ಅಭ್ಯಾಸ ಮಾಡುವುದು.

**117.** ಮೂರನೇ ತರಗತಿಯ ಅಧ್ಯಾಪಿಕೆಯು ಒಂದು ಅಧ್ಯಾಯದಲ್ಲಿ ಕೊಟ್ಟಿರುವ ಒಂದು ಕಥೆಯನ್ನು ಸರಿಯಾದ ಕ್ರಮದಲ್ಲಿ ಅನುಕ್ರಮವಾಗಿ ಜೋಡಿಸಲು ವಿದ್ಯಾರ್ಥಿಗಳನ್ನು ಕೇಳುತ್ತಾಳೆ. ಈ ಚಟುವಟಿಕೆಯು ಇದಕ್ಕೆ ಸಹಾಯ ಮಾಡುತ್ತದೆ

(1) ಓದುವ ಪರಿಜ್ಞಾನದ ಅನುಕೂಲತೆಗೆ

(2) ಅರ್ಥವಾಗುವಂಥ ಸಾಧನವಾಗಿ

(3) ವಿದ್ಯಾರ್ಥಿಗಳ ಬರಹದ ಕೌಶಲ್ಯವನ್ನು ಹೆಚ್ಚಿಸಲು

(4) ವಿದ್ಯಾರ್ಥಿಗಳ ಮಾತನಾಡುವ ಅವಧಿಯನ್ನು ಹೆಚ್ಚಿಸುವ ಕ್ರಮವಾಗಿ

**118.** ಎರಡನೇ ತರಗತಿಯ ಅಧ್ಯಾಪಿಕೆಯು ಕ್ಲಾಸಿನಲ್ಲಿ ಸಾಮಗ್ರಿಗಳ ಮೇಲೆ ಲೇಬಲ್ ಅಂಟಿಸಿದ್ದಾಳೆ. ಇದು ನಿಜವಾದ ಸಾಮಗ್ರಿಗಳನ್ನು ಪದಗಳ ಜೊತೆಗೆ ಜೋಡಿಸುವ ಕೆಲಸ ಮಾಡುತ್ತದೆ. ಈ ಬಗೆಯ ಕೆಲಸವು ವಿದ್ಯಾರ್ಥಿಗಳ ಈ ಕೆಳಗಿನದನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

(1) ವ್ಯಾಕರಣ

(2) ಬರಹದ ಕೌಶಲ್ಯ

(3) ಶಬ್ದಕೋಶ

(4) ವಿದ್ಯಾರ್ಥಿಯ ಬರವಣಿಗೆ

**119.** ಮಗುವಿನ ಭಾಷಾ ಸಾಮರ್ಥ್ಯವನ್ನು ನಿರ್ಧರಿಸುವಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಕಡಿಮೆ ಪರಿಣಾಮಕಾರಿಯಾದುದಾಗಿದೆ ?

(1) ಕಥೆ ಹೇಳುವುದು

(2) ಕಥೆ ಬರೆಯುವುದು

(3) ಒಂದು ಘಟನೆಯನ್ನು ವಿವರಿಸುವುದು

(4) ಶ್ರುತಲೇಖನ (Dictation)

**120.** ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ, ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದು ಹೆಚ್ಚಿನ ಸಹಕಾರಿಯಾಗಿದೆ ?

(1) ನಿಮ್ಮ ಮೆಚ್ಚಿನ ಪುಸ್ತಕಗಳಲ್ಲಿ ಒಂದನ್ನು ಹೆಸರಿಸಿ

(2) ಆದ್ಯತೆ ಪದವನ್ನು ಉಪಯೋಗಿಸಿ, ವಾಕ್ಯ ರಚನೆ ಮಾಡಿ

(3) ನೀನು ಮತ್ತು ನಿನ್ನ ತಾಯಿಯ ನಡುವಣ ಸಂಭಾಷಣೆಯನ್ನು ಬರೆಯುವುದು

(4) ನೀನು ಓದಿದ ಕವನದ ಕವಿಯನ್ನು ಹೆಸರಿಸುವುದು

**ಅಭ್ಯರ್ಥಿಗಳು ಕನ್ನಡವನ್ನು ಭಾಷೆ – II ಎಂದು ಆರಿಸಿ-ಕೊಂಡಿದ್ದರೆ ಮಾತ್ರ ಭಾಗ – V ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 121 – 150) ಉತ್ತರಿಸಬೇಕು.**

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

## ಭಾಗ – V
## ಭಾಷೆ – II
## ಕನ್ನಡ

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ಎಂದು ಆರಿಸಿಕೊಂಡಿದ್ದರೆ ಮಾತ್ರ, ಭಾಗ-V ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 121 - 150) ಉತ್ತರಿಸಬೇಕು.

**ನಿರ್ದೇಶನ : ಈ ಕೆಳಗಿನ ಲೇಖನದ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 121-128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :**

'ಕಂಟ್ರೋಲ್' ಆಗಿದ್ದರಿಂದ, ಭತ್ತ – ಅಕ್ಕಿ ವಿಪರೀತ ತುಟ್ಟಿ ಆಗಿದ್ದುವು. ಜನರಿಗೆ ಬಹಳ ತ್ರಾಸಾಗತೊಡಗಿತ್ತು. ಆಗ ಅವ್ವ, ನಮ್ಮ ಎದುರಿಗಿನ (ನಾವು ಮಾರಿದ) ಮನೆಯಲ್ಲಿ ಬಾಡಿಗೆಗಿದ್ದ ನರಗುಂದ ನಾಗಮ್ಮ, ಪಕ್ಕದ ಮನೆಯ (ಗರಗದ) ಅವಲಕ್ಕಿ ಗಂಗವ್ವ ಮುಂತಾದ ೪ – ೫ ಮಂದಿ ಕೂಡಿಕೊಂಡು ನಟ್ಟ ನಸುಕಿನಲ್ಲಿ, ೨ – ೩ ಗಂಟೆಗೇನೇ ಎದ್ದು ಹೊರಡುತ್ತಿದ್ದರು. ನಿಗದಿ, ಅಂಬಲಿಕೊಪ್ಪ ಮುಂತಾದ ೧೫ – ೨೦ ಮೈಲು ದೂರದ ಊರುಗಳಿಗೆ ಹೋಗಿ, ಒಂದು ಬುಟ್ಟಿಯಲ್ಲಿ ಹೊರಬಹುದಾದಷ್ಟು ಭತ್ತ ಖರೀದಿ ಮಾಡಿಕೊಂಡು, ಕತ್ತಲಾಗುವ ಹೊತ್ತಿಗೆ ಜಕಾತಿ ಕಟ್ಟೆಯವರ ಮತ್ತು ಪೊಲೀಸರ ಕಣ್ಣು ತಪ್ಪಿಸಿ, ಎಲ್ಲೆಲ್ಲಿಂದಲೋ ಕಲ್ಲುಮುಳ್ಳು ತುಳಿದು ಮನೆ ತಲುಪುತ್ತಿದ್ದರು. ಅದೊಂದು ದಿಗ್ವಿಜಯ ಮಾಡಿದಂತೆ. ವಾರದಲ್ಲಿ ೨ – ೩ ಸಲ ಹೀಗೆ ಮಾಡಿದರೆ ಅಲ್ಪ ಸ್ವಲ್ಪ ರೊಕ್ಕ ಉಳಿಯುತ್ತಿತ್ತು. ಅಕ್ಕಿ ಹಾಕಿಸಿದಾಗ ಉಳಿಯುವ ನುಚ್ಚು ಮನೆಯಲ್ಲಿ ನಮಗೆ ತಿನ್ನಲಿಕ್ಕೆ. ಒಳ್ಳೆಯ ಅಕ್ಕಿ ರೊಕ್ಕ ಕೊಟ್ಟು ಕೊಳ್ಳುವವರಿಗೆ. ಚಟಾಕು, ಸೇರು, ಪಡಿ, ಚಿಟ್ಟಿಗಳ ಲೆಕ್ಕ ಇಷ್ಟೊತ್ತಿಗೆ ಅವ್ವನಿಗೆ ತಿಳಿಯತೊಡಗಿದ್ದುವು. ಆದರೆ ಕಡೆತನಕ ಅವಳಿಗೆ ಇಪ್ಪತ್ತರ ಮುಂದಿನ ಅಂಕಿಗಳು ಮಾತ್ರ ಬರಲೇ ಇಲ್ಲ. ಮನೆಯಲ್ಲಿ ಹೊಗೆಗಟ್ಟಿದ ಮಣ್ಣಿನ ಗೋಡೆಯ ಮೇಲೆ ಸುಣ್ಣದ ಬಟ್ಟು ಗೆರೆಗಳನ್ನು ಮೂಡಿಸಿ ಅಂಕಿ ಲೆಕ್ಕ ನೆನಪಿಟ್ಟುಕೊಳ್ಳುತ್ತಿದ್ದಳು.

ಒಂದು ಸಲ ಭತ್ತ ತರುವಾಗ ಪೊಲೀಸರು ಹಿಡಿದು, ಮೈಹುಳಿ ನುಗ್ಗಾಗುವಂತೆ ಹೊಡೆದು ಬುಟ್ಟಿ, ಭತ್ತ ಕಸಿದುಕೊಂಡು ಕಳಿಸಿದ್ದರು. ಅವ್ವ ೩ – ೪ ದಿವಸ ಕೊಬ್ರಿ ಎಣ್ಣೆ ಹಚ್ಚಿಸಿಕೊಂಡು ನನ್ನ ಕೈಯಿಂದ ಭುಜ, ಬೆನ್ನಿಗೆ ಬಿಸಿ ನೀರು ಹಾಕಿಸಿಕೊಳ್ಳುತ್ತಿದ್ದಳು. ಆ ಸಲ ಗೆಳತಿಯರೆಲ್ಲರ ಭತ್ತ ಜಪ್ತಿ ಆಗಿತ್ತು. ಎಲ್ಲರಿಗೂ ದೊಡ್ಡ ಲುಕ್ಸಾನ ಆಗಿತ್ತು. ಹೊಡೆದರೂ ಸರಿ, ಭತ್ತ ಒಯ್ಯಲು ಬಿಟ್ಟಿದ್ದರೆ ಅವ್ವ ಸಂತೋಷ ಪಡುತ್ತಿದ್ದಳು. ಆಗ ಇವರೆಲ್ಲರೂ ಕೂಡಿಕೊಂಡು, ಏನೋ ಯೋಚಿಸಿ, ಅನಿವಾರ್ಯವಾಗಿ ಮಾದನಶೆಟ್ಟಿ ಸಾವಕಾರ ಶಂಕರಣ್ಣನ ಹತ್ತಿರ ಹೋಗಿ ಕೈಕಾಲು ಹಿಡಿದುಕೊಂಡರು. ಶಂಕರಣ್ಣನ ಅಣ್ಣನನ್ನು ಮಾತ್ರ ಮಾತಾಡಿಸುವುದೇ ಸಾಧ್ಯವಿರಲಿಲ್ಲ. ಅವರ ತಾಯಿಯಂತೂ (ಜೋರು ದನಿಯ, ರೋಬುದಾರ, ಅಸಾಧ್ಯ ಧಾಂಡಿಗ್ಯಾ ಹೆಣ್ಣುಮಗಳು) ಇಡೀ ಓಣಿಯ ಎಲ್ಲ ಸೌಲಭ್ಯಗಳು ತನ್ನವೇ ಎನ್ನುತ್ತಿದ್ದಳು. ನಂದಿಕೋಲ ಗುಡಿ ಎದುರಿನ ನಳದ ನೀರು ಇತ್ಯಾದಿ ತನಗೆ ಸಾತ ನಂತರವೇ ಉಳಿದವರಿಗೆ ಬಿಡುತ್ತಿದ್ದಳು. ಅವಳ ಮುಂದೆ ನೀಲವ್ವ, ಶಾರವ್ವರ ಆಟ ಸಹ ನಡೆಯುತ್ತಿರಲಿಲ್ಲ. ಶಂಕರಣ್ಣ ಮಾತ್ರ ನೋಡಲು ಅರ್ಭಾಟ ಆಸಾಮಿ. ಕಲ್ಲೀಮೀಸೆ, ದುಂಡು ಮುಖ, ಜರದ ರುಮಾಲು, ಬಿಳೇ ಮಲ್ಲ ಧೋತರ, ಕರೇ ಕೋಟು. ಬಗಲಲ್ಲಿ ಕೊಡೆ ಹಿಡಿದುಕೊಂಡು ಹೊರಟರೆ ಎಲ್ಲರೂ ಗೌರವ, ಭಯ ಮಿಶ್ರಿತ ಧ್ವನಿಯಲ್ಲಿ 'ಶರಣ್ರಿ…' ಎನ್ನುತ್ತಿದ್ದರು. ಅವರ ಅಣ್ಣ ಹೊರಟರೆ ಮಾತ್ರ, ಯಾರೂ ಮಾತಾಡಿಸುತ್ತಿರಲಿಲ್ಲ. ಸುಂದರ ಆದರೆ ಕ್ರೂರವೆನಿಸುತ್ತಿದ್ದ ಮುಖ. ಭಯದಿಂದ ಎಲ್ಲರೂ ದಾರಿ ಬಿಟ್ಟು ದೂರ ಸರಿಯುತ್ತಿದ್ದರು. ಬಹುಶಃ ಆ ಸೋದರರು ದಲಾಲಿ ಅಂಗಡಿ ವ್ಯಾಪಾರ ಮಾಡುತ್ತಿದ್ದರೇನೋ, ಅವ್ವನ ಮಾತು ಕೇಳಿ ದಯಾಳು

ಶಂಕರಣ್ಣನಿಗೆ ಕರುಳು ಚುರುಕ್ ಅನಿಸಿರಬೇಕು. ಆತ (ವಿವೇಕಾನಂದ ವೃತ್ತದ ಬಳಿಯಿರುವ) ಪೊಲೀಸ್ ಠಾಣೆಗೆ ಹೋಗಿ ಏನು ಹೇಳಿದರೋ ಏನೋ. ಏನೂ ಲಂಚ ಇತ್ಯಾದಿ ತೆಗೆದುಕೊಳ್ಳದೇ ಬುಟ್ಟಿಗಳನ್ನು ಮರಳಿಸಿದರು. ಅವ್ವ ಹೋಗಿ ಬುಟ್ಟಿ ತಂದಳು. ಎಲ್ಲರ ಬುಟ್ಟಿಗಳಿಂದ ಸ್ವಲ್ಪ ಸ್ವಲ್ಪ ಭತ್ತ ಮಾತ್ರ ಕಡಿಮೆ ಆಗಿದ್ದುವಂತೆ.

**121.** '೪ – ೫' ಮಂದಿ ಅಂದರೆ ಏನು ?

(1) 4 – 5 ಜನಗಳು

(2) 8 – 4 ಗುಂಪುಗಳು

(3) 2 – 4 ಮನುಷ್ಯರು

(4) 8 ರಿಂದ 21 ಹಸುಗಳ ಗುಂಪು

**122.** 'ಖರೀದಿ' ಯಾವ ಭಾಷಾ ಮೂಲದ ಪದ ?

(1) ಹಿಂದಿ

(2) ಸಂಸ್ಕೃತ

(3) ತಮಿಳು

(4) ಪರ್ಶಿಯನ್

**123.** ಜನರಿಗೆ ಯಾಕೆ ತೊಂದರೆಯಾಗತೊಡಗಿತ್ತು ?

(1) ಭತ್ತ ಮತ್ತು ಅಕ್ಕಿಯನ್ನು ದೂರದಿಂದ ತರಬೇಕಾದ ಕಾರಣ

(2) ಭತ್ತ ಮತ್ತು ಅಕ್ಕಿಯ ಬೆಲೆ ದುಬಾರಿಯಾದದ್ದರಿಂದ

(3) ಭತ್ತ ಮತ್ತು ಅಕ್ಕಿಯು ಮುಕ್ತವಾಗಿ ಸಿಗದ ಕಾರಣ

(4) ಭತ್ತವನ್ನು ಕುಟ್ಟಿ ಅಕ್ಕಿ ಮಾಡಬೇಕಾದ ಕಾರಣ

**124.** ಅವ್ವನಿಗೆ ಇಪ್ಪತ್ತರ ಮುಂದಿನ ಅಂಕಿಗಳು ಯಾಕೆ ಬರಲಿಲ್ಲ ?

(1) ಅವಳು ಲೆಕ್ಕದಲ್ಲಿ ಜಾಣೆಯಲ್ಲವಾದ್ದರಿಂದ

(2) ಅವಳು ಕಲಿತವಳಲ್ಲವಾದ್ದರಿಂದ

(3) ಅವಳು ಇಪ್ಪತ್ತರವರೆಗೆ ಮಾತ್ರ ಕಲಿತಿದ್ದರಿಂದ

(4) ಅವಳಿಗೆ ಗಣಿತವೆಂದರೆ ಆಗುತ್ತಿರಲಿಲ್ಲವಾದ್ದರಿಂದ

**125.** ಚಟಾಕು, ಸೇರು, ಪಡಿ – ಇವುಗಳು ಏನು ?

(1) ಅಳತೆ ಮಾಪನದ ವಿವಿಧ ಹೆಸರುಗಳು

(2) ವಿವಿಧ ಮನುಷ್ಯರಿಗೆ ಇಟ್ಟ ಅಡ್ಡ ಹೆಸರುಗಳು

(3) ತೂಕ ಮಾಡುವ ವಿವಿಧ ಗಾತ್ರದ ಬಟ್ಟುಗಳು

(4) ಹಳೆಯ ಕಾಲದ ಪಾತ್ರೆಗಳ ಹೆಸರುಗಳು

**126.** ಅವ್ವನು ಲೆಕ್ಕವನ್ನು ನೆನಪಿನಲ್ಲಿಟ್ಟು–ಕೊಳ್ಳುತ್ತಿದ್ದುದು ಹೇಗೆ ?

(1) ಗೋಡೆಯ ಮೇಲೆ ಬಿಳಿಯ ಗೆರೆ ಹಾಕಿ

(2) ಬೆರಳಿನಲ್ಲಿ ಎಣಿಕೆ ಮಾಡುವ ಮತ್ತು ಗೋಡೆಯ ಮೇಲೆ ಬರೆಯುವದರಿಂದ

(3) ಗೋಡೆಯ ಮೇಲೆ ಸುಣ್ಣದ ಗೆರೆ ಎಳೆದು

(4) ಮನಸ್ಸಿನಲ್ಲಿ ಎಣಿಕೆ ಹಾಕಿ ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದುದು

**127.** 'ಭಯದಿಂದ' – ಇಲ್ಲಿರುವ ವಿಭಕ್ತಿಯ ಸ್ವರೂಪವೇನು ?

(1) ದ್ವಿತೀಯ

(2) ಷಷ್ಠಿ

(3) ತೃತೀಯ

(4) ಸಪ್ತಮಿ

**128.** 'ತ್ರಾಸು' ಪದದ ಅರ್ಥವೇನು ?

(1) ತಕ್ಕಡಿ

(2) ತೊಂದರೆ

(3) ಸುಖ

(4) ತಡ

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ: 129 - 135) ಸೂಕ್ತ ಉತ್ತರಗಳನ್ನು ಆರಿಸುವುದರ ಮೂಲಕ ಉತ್ತರಿಸಿ :**

ಬುದ್ಧನ ಕೊನೆಯ ದಿನದ ಕುರಿತು ಬರೆದ ಖಂಡಕಾವ್ಯ ವೈಶಾಖಿ. ವೈಶಾಖಿ ಎಂದರೆ ವೈಶಾಖ ಪೂರ್ಣಿಮೆ. ಬುದ್ಧನು ಹುಟ್ಟಿದ್ದೂ, ಸಂಬೋಧಿಯನ್ನು ಪಡೆದದ್ದೂ, ಮತ್ತೆ ಪರಿನಿರ್ವಾಣವನ್ನು ಹೊಂದಿದ್ದೂ, ಈ ಮೂರು ಮಹತ್ವದ ಘಟನೆಗಳು ನಡೆದದ್ದೂ ವೈಶಾಖ ಪೂರ್ಣಿಮೆಯಂದು. ಪ್ರಪಂಚದ ಧಾರ್ಮಿಕ ಇತಿಹಾಸದಲ್ಲಿ ಹಾಗಾಗಿ ಆ ದಿನ ವಿಶೇಷದ್ದು. ಬೌದ್ಧರಿಗಂತೂ ಅತ್ಯಂತ ಪವಿತ್ರವೂ, ಮಹತ್ವವೂ ಆದದ್ದು. 'ವೈಶಾಖಿ' ಎಂಬೀ ಖಂಡಕಾವ್ಯವನ್ನು ೧೯೪೭ ರಲ್ಲಿ ಗೋವಿಂದ ಪೈಗಳು ರಚಿಸಿದರು. ಇದರಲ್ಲಿ ಏಳು ನೂರ ಇಪ್ಪತ್ತೈದು ಚರಣಗಳಿವೆ. 'ಗೊಲ್ಗೊಥಾ'ಕ್ಕಿಂತ ಗಾತ್ರದಲ್ಲಿ ಇಮ್ಮಡಿಯಾಗಿದೆ. ಗೊಲ್ಗೊಥಾ ಜಗದ ವಿಭೂತಿಪುರುಷನ ಅಕಾಲ ಮರಣ ಹಾಗೂ ಹಿಂಸಾ ಕಾರ್ಯಗಳ ದುರಂತ ಚಿತ್ರಣವಾದರೆ, 'ವೈಶಾಖಿ' ವಿಶ್ವವಿಖ್ಯಾತ ಧಾರ್ಮಿಕ ಪುರುಷನ ಪೂರ್ಣಾಯುಸ್ಸಿನ ಪ್ರಶಾಂತ ಮರಣದ ಕಥೆ. 'ಗೊಲ್ಗೊಥಾ'ದಲ್ಲಿ ಉತ್ಕಟತೆ, ಉದ್ವೇಗ, ಸಂಕಟಗಳು ಉಕ್ಕಿ ಬಂದರೆ, 'ವೈಶಾಖಿ'ಯಲ್ಲಿ ಶಾಂತಿ ಸಮಾಧಾನಗಳು ಕಂಡು ಬರುತ್ತವೆ. ಎರಡೂ ಮಹಾಪುರುಷರ ಬಾಳಿನ ಕೊನೆಯನ್ನು ಚಿತ್ರಿಸುವ ಕಾವ್ಯಗಳೆಂಬೀ ಸಾಮ್ಯ ಒಂದನ್ನುಳಿದರೆ ಅಂತಃ ಸತ್ವದಲ್ಲಿ ಎರಡೂ ಭಿನ್ನವಾಗಿ ಭಿನ್ನ ಪ್ರತಿಕ್ರಿಯೆಗಳನ್ನುಂಟು ಮಾಡುತ್ತವೆ.

ಪಾವೆಯೆಂಬ ಊರಲ್ಲಿ ತನ್ನ ಎಂಬತ್ತನೆಯ ವರ್ಷದ ಪ್ರಾಯ ತುಂಬುವ ಕೆಲದಿನಗಳ ಮುನ್ನ ಬುದ್ಧನು ಚುಂದನೆಂಬ ಕಮ್ಮಾರನ ಮನೆಯಲ್ಲಿ 'ಸೂಕರಮದ್ದವ'ವನ್ನು ಉಂಡನು. ಅಲ್ಲಿರುವ ಆತನಿಗೆ ಸಹನಾತೀತವಾದ ಆಮಶಂಕೆಯ ರೋಗ ತೊಡಗಿ, ತಾನು ಪರಿನಿರ್ವಾಣ ಹೊಂದುವ ದಿನ ಸಮೀಪಿಸಿತೆಂದು ಶಿಷ್ಯರಿಗೆ ಅರುಹಿ, ಕುಶಿನಾರದ ಹಾದಿ ಹಿಡಿವನು. ದಾರಿಯಲ್ಲಿ ತನ್ನ ಪ್ರಿಯ ಶಿಷ್ಯನಾದ ಆನಂದನಿಂದ ನೀರು ತರಿಸಿ ಕುಡಿದು, ಒಂದು ಮರದ ಬುಡದಲ್ಲಿ ಕುಳಿತಿದ್ದಾಗ, ಪುಕ್ಕುಸನೆಂಬ ಮಲ್ಲನು ಅಲ್ಲಿಗೆ ಬಂದು ಆತನಿಂದ ಧರ್ಮೋಪದೇಶ ಹೊಂದಿ, ಆತನಿಗೆ ಎರಡು ಹೊಂಬಟ್ಟೆಗಳನ್ನು ಕಾಣಿಕೆಯಾಗೀಯುವನು. ಬುದ್ಧನು ಪಯಣ ಮುಂದುವರಿಸಿ ಕಕುತ್ಥಾನದಿಯಲ್ಲಿ ಮಿಂದು ಬಳಿಯಲ್ಲಿದ್ದ ಆಮ್ರವನವನ್ನು ಹೊಕ್ಕು ಅಲ್ಲಿ ವಿಶ್ರಮಿಸುತ್ತಿದ್ದಾಗ ಚುಂದನು ಬಡಿಸಿದ ಸೂಕರಮದ್ದವವು ತನಗೆ ಕೊನೆಯ ತುತ್ತಾಯಿತೆಂದು ಆತನನ್ನು ದೂರದಿರಿ ಎಂದು ಬಿಕ್ಖುಗಳಿಗೆ ಬೋಧಿಸಿ, ಅಲ್ಲಿಂದ ಮುನ್ನಡೆದು ಕುಶಿನಾರದಲ್ಲಿರುವ ಮಲ್ಲರ ಸಾಲವನಕ್ಕೆ ಹೋಗಿ ಅಲ್ಲಿ ಉತ್ತರಶೀರ್ಷನಾಗಿ ಮಲಗಿದವನು, ಮತ್ತೆ ಏಳಲೇ ಇಲ್ಲ. ಬುದ್ಧನು ಹಾಗೆ ಮಲಗಿದ್ದಾಗ ಆನಂದನು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತು, ಸದರ್ಥದಲ್ಲಿ ಪ್ರವೇಶಿಸಬೇಕೆಂದು ಬಿಕ್ಖುಗಳಿಗೆ ಬೋಧಿಸಿ, ತನ್ನ ಪರಿನಿರ್ವಾಣಕ್ಕೆ ಕುಶಿನಾರವೇ, ಯೋಗ್ಯಸ್ಥಳವೆಂದು ಆನಂದನಿಗೆ ತಿಳಿಸಿ ಅಲ್ಲಿಯ ಮಲ್ಲರಿಗೂ ಧರ್ಮೋಪದೇಶವನ್ನಿತ್ತನು.

**129. ಗೋವಿಂದ ಪೈಗಳ 'ವೈಶಾಖಿ' ಏನು ?**

(1) ಬುದ್ಧನನ್ನು ಕುರಿತ ಜೀವನ ಚರಿತ್ರೆ

(2) ಬುದ್ಧನನ್ನು ಕುರಿತ ಖಂಡಕಾವ್ಯ

(3) ಬುದ್ಧನನ್ನು ಕುರಿತ ಕಾವ್ಯದ ಭಾಗ

(4) ವೈಶಾಖ ಋತುವಿನ ವರ್ಣನೆಯ ಕಾವ್ಯ

**130. 'ಗೊಲ್ಗೊಥಾ' ಕಾವ್ಯದ ವಸ್ತು ಏನು ?**

(1) ಮಹಾಪುರುಷನ ಮೃತ್ಯು ಮತ್ತು ಕೊಲೆಯ ಘಟನೆಗಳು

(2) ಮಹಾಪುರುಷನ ಜೀವನಚರಿತ್ರೆ

(3) ಮಹಾಪುರುಷನ ಅಕಾಲ ಮರಣ ಮತ್ತು ಹಿಂಸೆಯ ಘಟನೆಗಳು

(4) ಏಸುವಿನ ಜನನ ಮರಣದ ಕಥೆ

131. ಸಾವು ಸಮೀಪಿಸಿತೆಂದು ಬುದ್ಧನಿಗೆ ಅನ್ನಿಸಿದ್ದು ಯಾವಾಗ ?
(1) ಕೆಟ್ಟ ತರಕಾರಿಗಳನ್ನು ಬಳಸಿದ ಊಟ ಮಾಡಿದ್ದರಿಂದ
(2) ಪರಿನಿರ್ವಾಣ ಕಾಲವು ಸಮೀಪಿಸಿದೆ ಎಂದು ಅವನಿಗೆ ಗೊತ್ತಾದ್ದರಿಂದ
(3) ಹೆಚ್ಚು ಓಡಾಟ ಮಾಡಿ ದಣಿದಿದ್ದರಿಂದ
(4) ಸೂಕರಮದ್ದವವನ್ನು ಊಟ ಮಾಡಿದ ನಂತರ

132. 'ಹೊಂಬಟ್ಟೆ' ಪದವನ್ನು ಬಿಡಿಸಿ ಬರೆಯಿರಿ.
(1) ಹೊನ್ನಿನ + ಬಟ್ಟೆ (2) ಹೊನ್+ಬಟ್ಟೆ
(3) ಹೊಂಬ್ + ಅಟ್ಟೆ (4) ಪೊನ್ + ಪಟ್ಟೆ

133. 'ಆಮ್ರವನ' ವೆಂದರೆ ಏನು ?
(1) ನೆಲ್ಲಿಕಾಯಿಯ ಮರಗಳ ತೋಟ
(2) ದಾಳಿಂಬೆ ಹಣ್ಣಿನ ಮರಗಳ ತೋಟ
(3) ಮಾವಿನಹಣ್ಣಿನ ತೋಟ
(4) ಹುಣಿಸೆಹಣ್ಣಿನ ಕಾಡು

134. ವೈಶಾಖಿ ಮತ್ತು ಗೊಲ್ಗೊಥಾ ಕಾವ್ಯಗಳಲ್ಲಿ ಕಾಣುವ ಸಾಮ್ಯತೆಯ ಅಂಶವೇನು ?
(1) ಎರಡೂ ಕಾವ್ಯಗಳು ಮಹಾವ್ಯಕ್ತಿಗಳ ದಾರುಣ ದುರಂತ ಕಥೆ ಹೇಳುತ್ತವೆ.
(2) ಎರಡೂ ಕಾವ್ಯಗಳು ಮಹಾವ್ಯಕ್ತಿಗಳ ಕೊನೆಯ ದಿನಗಳನ್ನು ಚಿತ್ರಿಸುತ್ತವೆ.
(3) ಎರಡೂ ಕಾವ್ಯಗಳು ಧರ್ಮದ ಉಪದೇಶವನ್ನು ಮಾಡುತ್ತವೆ.
(4) ಎರಡೂ ಕಾವ್ಯಗಳು ಭಾರತದ ಮಹಾಪುರುಷರ ಕಥೆಯನ್ನು ಹೊಂದಿವೆ.

135. ಬೌದ್ಧರಿಗೆ ವಿಶೇಷವಾದ ದಿನ ಯಾವುದು ?
(1) ವೈಶಾಖ ಪೂರ್ಣಿಮೆಯ ದಿನ
(2) ಬುದ್ಧನು ಹುಟ್ಟಿದ ದಿನ ಮಾತ್ರ
(3) ಬುದ್ಧನು ಪರಿನಿರ್ವಾಣ ಹೊಂದಿದ ದಿನ
(4) ಬುದ್ಧನು ಸಿದ್ಧಾರ್ಥನಾದ ದಿನ

ನಿರ್ದೇಶನ : ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.

136. ಮಗುವಿನ ಭಾಷಾ ಗಳಿಕೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ ?
(1) ಶಿಕ್ಷಕ
(2) ಕುಟುಂಬ
(3) ಶಾಲೆ
(4) ಸಮೂಹ ಮಾಧ್ಯಮಗಳು (media)

137. ಈ ವಿಧಾನದ ವ್ಯಾಕರಣದ ನಿಯಮಗಳನ್ನು ನೆನಪಿನಲ್ಲಿಡುವುದು ಈ ವಿಧಾನದ ಮೂಲ ಆಶಯ :
(1) ಸಂರಚನಾತ್ಮಕ ವಿಧಾನ (Structural method)
(2) ನೇರ ವಿಧಾನ (Direct method)
(3) ವ್ಯಾಕರಣ ಅನುವಾದ ವಿಧಾನ (Grammar translation method)
(4) ಸಹಜವಾದ ವಿಧಾನ (Natural approach)

138. ಭಾಷಾ ಕಲಿಕೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಮಹತ್ವದ್ದಲ್ಲ ?
(1) ಉತ್ತೇಜಿಸುವುದು (Motivation)
(2) ಸ್ವನಂಬಿಕೆ (self-confidence)
(3) ಕಲಿಯುವವರ ಕಡೆಗೆ ಆಸಕ್ತಿ
(4) ಭಾಷಾಂತರ

139. ಒಬ್ಬ ಅಧ್ಯಾಪಿಕೆಯಾಗಿ, ಮಕ್ಕಳಿಗೆ ಬರೆಯುವುದನ್ನು ಕಲಿಸುವಾಗ ನೀವು ಏನು ಮಾಡುತ್ತೀರಿ ?

(1) ಆ ಭಾಷೆಯ ವರ್ಣಮಾಲೆಯನ್ನು ಬರೆಯುವಂತೆ ಮಕ್ಕಳನ್ನು ಕೇಳುವುದು.

(2) ಮಕ್ಕಳಿಗೆ ಅವರ ಆಲೋಚನೆಗಳನ್ನು ಬರೆದಿಡಲು ಅವಕಾಶ ಒದಗಿಸುವುದು.

(3) ಮಕ್ಕಳಿಗೆ ಮೊದಲು ಉರು ಹೊಡೆದು (memorize) ನಂತರ ಒಳ್ಳೆಯ ಕೈ ಬರವಣಿಗೆಯಲ್ಲಿ ಒಂದು ಪ್ಯಾರಾ ಬರೆಯುವಂತೆ ಹೇಳುವುದು.

(4) ಕಪ್ಪು ಹಲಗೆಯ ಮೇಲೆ ಬರೆದ ಅಕ್ಷರ-ಗಳನ್ನು ಬರೆದುಕೊಳ್ಳಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು.

140. ವಿದ್ಯಾರ್ಥಿಗಳಿಗೆ ಕಲಿಸುವ – ಕಲಿಯುವ ಸಾಮಗ್ರಿಯನ್ನು (TLM) ಆಯ್ದುಕೊಳ್ಳುವಾಗ ಈ ಕೆಳಗಿನವುಗಳಲ್ಲಿ ಯಾವುದು ಅತ್ಯಂತ ಮಹತ್ವವಾದದ್ದು ?

(1) ಹತ್ತಿರದ ಮಾರುಕಟ್ಟೆಯಲ್ಲಿ ಅದು ಸಿಗುವಂತಿರಬೇಕು.

(2) ಅದು ಅತಿ ಹೆಚ್ಚಿನ ಬೆಲೆಯದ್ದಾಗಿರಬಾರದು.

(3) ಅದು ವಿದ್ಯಾರ್ಥಿಗಳಿಂದಲೇ ಸಿದ್ಧಗೊಳಿಸಿದ್ದಾಗಿರಬೇಕು.

(4) ಅದು ಸಂದರ್ಭಕ್ಕೆ ಅನುಗುಣವಾಗಿದ್ದು (contextualize) ಸಂಘಟಿತ (integrated) ವಿಧಾನದಲ್ಲಿ ಉಪಯೋಗವಾಗುವಂತಿರಬೇಕು.

141. ಎರಡನೇ ತರಗತಿಯ ಕೆಲವು ವಿದ್ಯಾರ್ಥಿಗಳು ಕೆಲವು ಧ್ವನಿಗಳನ್ನು ಉಚ್ಛರಿಸಲು ಕಷ್ಟಪಡುತ್ತಿದ್ದಾರೆ. ಇಂಥ ವಿದ್ಯಾರ್ಥಿಗಳ ಕಷ್ಟವನ್ನು ಪರಿಹರಿಸಲು ಅನುಸರಿಸಬಹುದಾದ ಅತ್ಯಂತ ಪರಿಣಾಮಕಾರಿಯಾದ ಉಪಾಯಗಳು ಈ ಕೆಳಗಿನವುಗಳಲ್ಲಿ ಯಾವುದಾಗಿದೆ ?

(1) ಮಾನವನ ಬಾಯಿಯ ಮಾಡೆಲ್ ಒಂದನ್ನು ಉಪಯೋಗಿಸಿ ಧ್ವನಿಯ ಉತ್ಪಾದನೆಯಲ್ಲಿ ಒಳಗೊಳ್ಳುವ ಉಚ್ಛಾರಣೆಯ ಸ್ಥಾನವನ್ನು ತೋರಿಸಬೇಕು.

(2) ಅವಳು (ಶಿಕ್ಷಕಿ) ಕನಿಷ್ಟತಮ ಜೋಡಿ ಕ್ರಿಯೆ (minimum pair activity) ಯನ್ನು ಅಂದರೆ ಪ್ರಾಸಬದ್ಧ ಪದಗಳನ್ನು ಉಪಯೋಗಿಸಿ, ಅದನ್ನು ಅವರು ಉಚ್ಛಾರ ಮಾಡಿ ಒಟ್ಟು ಪದದ ಧ್ವನಿಯನ್ನು ಗುರುತಿಸುವಂತೆ ಮಾಡಬೇಕು.

(3) ಪಠ್ಯವನ್ನು ಜೋರಾಗಿ ಓದುವುದು ಮತ್ತು ಅದರ ಹಿಂದೆ ಇರುವ ಧ್ವನಿಯ ಬಳಕೆಯನ್ನು ವಿವರಿಸುವುದು.

(4) ಅವರಿಗೆ ನಿತ್ಯ ಅಭ್ಯಾಸ ಮತ್ತು ಪ್ರಯೋಗ ಮಾಡುವಂತೆ ಹೇಳಿ ಅವರು ಅದನ್ನು ಮತ್ತೆ ಮತ್ತೆ ಪ್ರಯೋಗಿಸುವುದರಿಂದ ಕಷ್ಟ ಸಾಧ್ಯತೆಯನ್ನು ಹೋಗಲಾಡಿಸಿ-ಕೊಳ್ಳುವಂತೆ ಮಾಡುವುದು.

142. ವ್ಯಾಕರಣದ ನಿಯಮಗಳ ಮೇಲೆ ಕೇಂದ್ರೀಕರಿಸಿ ನಂತರ ಅದನ್ನು ಆಧರಿಸಿದ ಉದಾಹರಣೆಗಳನ್ನು ನಂತರ ಕೊಡುವ ಕಲಿಸುವಿಕೆಯ ವಿಧಾನವನ್ನು ಹೀಗೆ ಕರೆಯುತ್ತಾರೆ

(1) ಅನುಗಮನ ವಿಧಾನ (Inductive method)

(2) ನಿಗಮನ ವಿಧಾನ (Deductive method)

(3) ವ್ಯಾಕರಣ ಅನುವಾದಿತ ವಿಧಾನ (Grammar Translation method)

(4) ನೇರ ವಿಧಾನ (Direct method)

143. ಕಲಿಯುವವರು ಭಾಷೆಯನ್ನು ಹೀಗೆ ಗಳಿಸುತ್ತಾರೆ :

(1) ಭಾಷೆಯನ್ನು ಸಹಜವಾದ ಅಂತರ್ ಸಂವಹನ ವಾತಾವರಣದಲ್ಲಿ ಬಳಸುವ ಮೂಲಕ.

(2) ಭಾಷೆಯ ರಚನೆಯನ್ನು ವಿಶ್ಲೇಷಿಸುವುದರ ಮೂಲಕ.

(3) ಆಯಾ ಭಾಷೆಯ ಸಾಹಿತ್ಯವನ್ನು ಓದುವುದರ ಮೂಲಕ.

(4) ಆಯಾ ಭಾಷೆಯನ್ನು ಮಾತನಾಡುವವರ ಸಂಸ್ಕೃತಿಯನ್ನು ಕಲಿಯುವುದರ ಮೂಲಕ.

144. ಸೂಕ್ಷ್ಮವಾದ ಸಹಜ ಕೌಶಲ್ಯವನ್ನು (Motor skill) ಬೆಳೆಸಿಕೊಳ್ಳುವುದಕ್ಕೆ ಈ ಕೆಳಗಿನವುಗಳಲ್ಲಿ ಯಾವುದು ಉದಾಹರಣೆಯಾಗಿದೆ ?

(1) ಹತ್ತುವುದು

(2) ಜಿಗಿಯುವುದು

(3) ಬರೆಯುವುದು

(4) ಓದುವುದು

145. ತರಗತಿಯಲ್ಲಿ ಅಧ್ಯಾಪಿಕೆಯು ಕೇಳುವ ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದು ಬಹುಭಾಷಿಕತ್ವವನ್ನು ಬೆಳೆಸುತ್ತದೆ ?

(1) ಬಲೂನುಗಳು ಎಷ್ಟು ಎತ್ತರ ಹಾರಬಲ್ಲುವು ?

(2) ನಿಮ್ಮ ಭಾಷೆಯಲ್ಲಿ ತರಕಾರಿಗಳ ಹೆಸರನ್ನು ಬರೆಯಿರಿ.

(3) ನಿಮ್ಮ ಹತ್ತಿರ ಮೆಚ್ಚಿನ ಪ್ರಾಣಿ ಇದೆಯಾ ?

(4) ನೀವು ಪತ್ರಗಳನ್ನು ಬರೆದಿದ್ದೀರಾ ?

146. ಪ್ರಾಥಮಿಕ (ಕೆಳಗಿನ) ತರಗತಿಗಳಲ್ಲಿ ಪ್ರಾಸಬದ್ಧ ಹಾಡುಗಳನ್ನು ಉಪಯೋಗಿಸಬೇಕು ಏಕೆಂದರೆ ಅವು :

(1) ಉದ್ದೇಶಿತ ಭಾಷೆಯನ್ನು ಮಾತನಾಡಲು ಅವಕಾಶವನ್ನು ಒದಗಿಸುತ್ತವೆ.
(2) ಕಲಿಯುವವರನ್ನು ಶಿಸ್ತಿನಿಂದ ಇಡುತ್ತವೆ.
(3) ಉದ್ದೇಶಿತ ಭಾಷೆಯ ವ್ಯಾಕರಣವನ್ನು ಕಲಿಯಲು ಅವಕಾಶ ಮಾಡಿಕೊಡುತ್ತವೆ.
(4) ಕಠಿಣ ಪದಗಳನ್ನು ವಿವರಿಸಿ ವಾಕ್ಯಗಳ ರಚನೆಯನ್ನು ಮಾಡುವಲ್ಲಿ ಕಲಿಯುವವರನ್ನು ಸಹಾಯ ಮಾಡುತ್ತವೆ.

147. ತರಗತಿಯಲ್ಲಿ ಕೇಳುವ ಚಟುವಟಿಕೆಯನ್ನು (listening activity) ಪ್ರಾರಂಭಿಸಲು ಶಿಕ್ಷಕಿ ನಿಶ್ಚಯಿಸುತ್ತಾಳೆ. ಅವಳು ಅತ್ಯಂತ ಆಲೋಚನಾತ್ಮಕ ಚಟುವಟಿಕೆಗಳನ್ನು ಯೋಜಿಸಿ, ಕಲಿಯುವವರು ಸೂಕ್ಷ್ಮ ಪ್ರಶ್ನೆಗಳನ್ನು ಕೇಳುವಂತೆ ಮಾಡುತ್ತಾಳೆ. ಮತ್ತು ಚರ್ಚೆಯಲ್ಲಿ ಆಸಕ್ತಿ ತೋರಿಸುವಂತೆ ಯೋಜಿಸುತ್ತಾಳೆ. ಈ ಸಿದ್ಧತೆಗಳು ಇದರ ಸಲುವಾಗಿ ಯೋಜಿಸಲಾಗಿರುತ್ತದೆ :

(1) ಕೇಳುವ ಪೂರ್ವದ ಚಟುವಟಿಕೆಗಳು (pre listening activities)
(2) ಕೇಳುವಾಗಿನ ಚಟುವಟಿಕೆಗಳು (while listening activities)
(3) ಕೇಳುವ ನಂತರದ ಚಟುವಟಿಕೆಗಳು (post listening activities)
(4) ಕೇಳುವ ಚಟುವಟಿಕೆಗಳು ಗ್ರಹಿಸುವ ವಿನ್ಯಾಸವಾಗಿ (follow-up of listening activities)

148. ಭಾಷಾ ತರಗತಿಯಲ್ಲಿ ಚಿತ್ರಗಳು / ಪೋಸ್ಟರ್ ಗಳನ್ನು ಬಳಸುವ ಬಗ್ಗೆಗಿನ ಯಾವ ಹೇಳಿಕೆ ಸರಿ ಅಲ್ಲ ?

(1) ಅದು ಮಕ್ಕಳಿಗೆ ಚಿತ್ರವನ್ನು ಗ್ರಹಿಸುವ ಅವಕಾಶವನ್ನು ಒದಗಿಸುತ್ತದೆ.
(2) ವಿದ್ಯಾರ್ಥಿಗಳಿಗೆ ಅವರು ಅಭಿವ್ಯಕ್ತಿಸಲು ಅದು ಅವಕಾಶ ಮಾಡಿ ಕೊಡುತ್ತದೆ ಮತ್ತು ಚಿತ್ರಗಳ ಆಧಾರದ ಮೇಲೆ ಬರೆಯಲು ಪ್ರೇರೇಪಿಸುತ್ತದೆ.
(3) ತರಗತಿಯಲ್ಲಿ ಮಕ್ಕಳ ಕಲ್ಪನಾಜಗತ್ತು ಹಾಗೂ ಸೃಜನಶೀಲತೆಯ ಸ್ವರೂಪಕ್ಕೆ ಅದು ಅವಕಾಶ ಮಾಡಿ ಕೊಡುತ್ತದೆ.
(4) ಅದು ವಿದ್ಯಾರ್ಥಿಗಳಿಗೆ ಕೇಳುವ ಕೌಶಲ್ಯವನ್ನು ಬೆಳೆಸಿಕೊಳ್ಳಲು ಅವಕಾಶ ನೀಡುತ್ತದೆ.

149. ಉಗಮವಾಗುತ್ತಿರುವ ಸಾಕ್ಷರತೆಯ ಘಟ್ಟದಲ್ಲಿ __________ ಇದೂ ಸಹ ಬರವಣಿಗೆಯ ಅಡಿಯಲ್ಲಿ ಬರುತ್ತದೆ.

(1) ಪತ್ರಗಳನ್ನು ತಯಾರಿಸುವುದು
(2) ಪದಗಳನ್ನು ಬರೆಯುವುದು
(3) ವಾಕ್ಯಗಳನ್ನು ಮಾಡುವುದು
(4) ಚಿತ್ರಗಳನ್ನು ಬರೆಯುವುದು (Drawing)

150. ಕಲಿಯುವವರ ಭಾಷೆಯ ಪ್ರಯೋಗವನ್ನು ನಿರ್ಧರಿಸಲು ಈ ಕೆಳಗಿನವುಗಳಲ್ಲಿ ಯಾವುದು ಅತ್ಯಂತ ಮುಖ್ಯವಾದದ್ದು ?

(1) ಚೆಕ್ ಲಿಸ್ಟ್
(2) ರೇಟಿಂಗ್ ಸ್ಕೇಲ್
(3) ಪೋರ್ಟ್ ಫೋಲಿಯೊ
(4) ಅಂತರ್ ಸಂವಹನ

# SPACE FOR ROUGH WORK

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2 ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ ಬಾಲ್ ಪಾಯಿಂಟ್ ಪೆನ್ ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತು ಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯ ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಕೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್ ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್ ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರೀ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್ ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್ ನಲ್ಲಿ, ಪರೀಕ್ಷಾರ್ಥಿ ಬೋರ್ಡ್ ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್ ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

**निम्नलिखित निर्देशों को ध्यान से पढ़ें :**

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें ।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **काले/नीले बॉल पॉइन्ट पेन** से भरें । एक बार उत्तर अंकित करने के बाद उसे बदला नहीं जा सकता है ।
3. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ । परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें ।
4. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी ।
5. परीक्षा पुस्तिका / उत्तर पत्र में दिए गए परीक्षा पुस्तिका संकेत व संख्या को परीक्षार्थी सही तरीके से हाज़िरी-पत्र में लिखें ।
6. OMR उत्तर पत्र में कोडित जानकारी को एक मशीन पढ़ेगी । इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए ।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है ।
8. मोबाइल फोन, बेतार संचार युक्तियाँ (स्वीच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए । इस सूचना का पालन न होने पर इसे परीक्षा में अनुचित साधनों का प्रयोग माना जाएगा और उनके विरुद्ध कार्यवाही की जाएगी, परीक्षा रद्द करने सहित ।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें ।
11. कार्यरत निरीक्षक को अपना उत्तर पत्र दिए बिना एवं हाज़िरी-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे । यदि किसी परीक्षार्थी ने दूसरी बार हाज़िरी-पत्र पर हस्ताक्षर नहीं किए, तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा । **परीक्षार्थी अपने बाएँ हाथ के अंगूठे का निशान हाज़िरी-पत्र में दिए गए स्थान पर अवश्य लगाएँ ।**
12. इलेक्ट्रॉनिक / हस्तचालित परिकलक का उपयोग वर्जित है ।
13. परीक्षा हॉल/कक्ष में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं । अनुचित साधनों के सभी मामलों का फैसला बोर्ड के नियमों एवं विनियमों के अनुसार होगा ।
14. किसी हालत में परीक्षा पुस्तिका और उत्तर पत्र का कोई भाग अलग न करें ।
15. **परीक्षा सम्पन्न होने पर, परीक्षार्थी हॉल / कक्ष छोड़ने से पूर्व उत्तर पत्र कक्ष-निरीक्षक को अवश्य सौंप दें । परीक्षार्थी अपने साथ इस परीक्षा पुस्तिका को ले जा सकते हैं ।**

**READ THE FOLLOWING INSTRUCTIONS CAREFULLY:**

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Black/Blue Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet / Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/ room.
8. Mobile phones, wireless communication devices (even in switched off mode) and the other banned items should not be brought in the examination halls/ rooms. Failing to comply with this instruction, it will be considered as using unfair means in the examination and action will be taken against them including cancellation of examination.
9. Each candidate must show on demand his / her Admit Card to the Invigilator.
10. No candidate, without special permission of the Centre Superintendent or Invigilator, should leave his / her seat.
11. The candidates should not leave the Examination Hall/ Room without handing over their Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet a second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic / Manual Calculator is prohibited.
13. The candidates are governed by all Rules and Regulations of the Board with regard to their conduct in the Examination Hall/Room. All cases of unfair means will be dealt with as per Rules and Regulations of the Board.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall / Room.** ***The candidates are allowed to take away this Test Booklet with them.***